SCCH – 01
MVC No.9254/2009
Court witness No.1

## BEFORE THE MOTOR ACCIDENT CLAIMS TRIBUNAL, CHIEF JUDGE, COURT OF SMALL CAUSES JUDGE, BENGALURU.

## MVC.NO.9254/2009

| | |
|---|---|
| Name | B.S.Dileep Kumar |
| Father's name | Shivanandaiah |
| Age | 47 years |
| Occupation | FDA, RTO Office, Yeshwanthpura |
| Residence | Tumkur |

**ಸಾಕ್ಷಿಗೆ ದಿನಾಂಕಃ 15.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಸೂಚನೆಃ** ಈ ಸಾಕ್ಷಿದಾರರನ್ನು **2 ನೇ** ಎದುರುದಾರರ ಪರ ವಕೀಲರು ಸಮನ್ಸ್ ತೆಗದುಕೊಂಡು ಕರೆಸಿದ್ದಾರೆ ಆದರೆ ಮಾನ್ಯ ವಕೀಲರು ಈ ದಿನ ಹಾಜರಿರುವುದಿಲ್ಲ. ಅವರ ಕಿರಿಯ ವಕೀಲ ಮಿತ್ರರಾದ ಶ್ರೀ.ಟಿ.ವಿ.ಎನ್ ರವರು ಹಾಜರಿದ್ದಾರೆ ಮತ್ತು ಸಮಯ ಕೇಳಿದ್ದಾರೆ. ಈ ನ್ಯಾಯಾಲಯದ ಅಭಿಪ್ರಾಯದಲ್ಲಿ ಸಾಕ್ಷಿಗಳ ಸಮಯ ಮತ್ತು ನ್ಯಾಯಾಲಯದ ಸಮಯ ಮತ್ತು ಕಕ್ಷಿದಾರರ ಸಮಯ ಎಲ್ಲವೂ ಅಮೂಲ್ಯವಾದದ್ದೇ. ಆದ ಕಾರಣದಿಂದ ನ್ಯಾಯಾಲಯವೇ ಈ ಸಾಕ್ಷಿದಾರರ ಮುಖ್ಯ ವಿಚಾರಣೆಯನ್ನು ಮಾಡಿಕೊಂಡಿದೆ.

**ಮುಖ್ಯ ವಿಚಾರಣೆ: ನ್ಯಾಯಾಲಯದಿಂದ:**

1) ಈ ನ್ಯಾಯಾಲಯದಿಂದ ನಮ್ಮ ಕಚೇರಿಗೆ ಒಂದು ಸಮನ್ಸ್ ಬಂದಿತ್ತು ಮತ್ತು ಆ ಸಮನ್ಸ್ ಮೂಲಕ ನ್ಯಾಯಾಲಯದವರು ನಮ್ಮ ಕಚೇರಿಯವರಿಗೆ ಒಂದು ನಿರ್ದೇಶನ ಕೊಟ್ಟಿದ್ದರು ಮತ್ತು ಆ ಮೂಲಕ ಕೆಎ**-04-**ಟಿ**-0568** ಸಂಖ್ಯೆಯನ್ನು ಹೊಂದಿರುವ ವ್ಯವಸಾಯಕ್ಕೆ ಉಪಯೋಗಿಸುವ ಒಂದು ಟ್ರ್ಯಾಕ್ಟರ್ ಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಬೇಕು ಎಂಬುದಾಗಿ ನಿರ್ದೇಶನವನ್ನು ನೀಡಿತ್ತು.

2) ನ್ಯಾಯಾಲಯದವರು ನೀಡಿದ ನಿರ್ದೇಶನದಂತೆ ಸದರಿ ಟ್ರ್ಯಾಕ್ಟರ್ ವಾಹನದ ಬಗ್ಗೆ ವಾಹನ್ ತಂತ್ರಾಂಶ **4** ರಲ್ಲಿ ಲಭ್ಯವಿರುವ **ಬಿ** ರಿಜಿಸ್ಟರ್ ನ ಧೃಡೀಕೃತ ನಕಲು ಮತ್ತು ಇತರೆ ಎರಡು ದಾಖಲೆಗಳನ್ನು ತಂದಿದ್ದೇನೆ.

3) ಸದರಿ ಬಿ ರಿಜಿಸ್ಟರ್ ನಕಲನ್ನು ಹಾಜರುಪಡಿಸಿದ್ದು ಅದನ್ನು **Ex.C.1** ಎಂದು ಗುರುತಿಸಿದೆ.

4) ನಿ.ಸಿ.**1** ರಲ್ಲಿ ಇರುವ ಮಾಹಿತಿಯ ಪ್ರಕಾರ ದಿಃ **21.11.1996** ರಂದು ಮೊದಲ ಬಾರಿಗೆ ಯಶವಂತಪುರದ ಆರ್.ಟಿ.ಓ ಕಚೇರಿಯಲ್ಲಿ ನೋಂದಣಿ ಮಾಡಿಸಿದ್ದಾರೆ. ನಂತರ ದೇವನಹಳ್ಳಿಯಲ್ಲಿ ಆರ್.ಟಿ.ಓ ಕಚೇರಿಯು ಪ್ರಾರಂಭ ಆದಾಗ ಸದರಿ ವಾಹನದ ಮೂಲ ಕಡತವನ್ನು ದೇವನಹಳ್ಳಿ

ಕಚೇರಿಗೆ ಕಳುಹಿಸಿಕೊಡಲಾಗಿದೆ. ಈ ನ್ಯಾಯಾಲಯದಿಂದ ನಮ್ಮ ಕಚೇರಿಗೆ ಸಮನ್ಸ್ ಬಂದ ನಂತರ ಸದರಿ ದಾಖಲೆಯನ್ನು ದೇವನಹಳ್ಳಿಯ ಆರ್.ಟಿ.ಓ ಕಚೇರಿಯಿಂದ ನಾವು ತರಿಸಿಕೊಂಡು ಅದರ ಧೃಡೀಕೃತ ನಕಲನ್ನು ತಯಾರು ಮಾಡಿ ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ.

5) ಇದರ ಜೊತೆಗೆ ದೇವನಹಳ್ಳಿ ಆರ್.ಟಿ.ಓ ದವರು ದಿಃ**13.09.2007** ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು ಪೂರ್ವ ಕಚೇರಿ ರವರಿಗೆ ಒಂದು ತೀರುವಳಿ ಪತ್ರವನ್ನು ನೀಡಿದ್ದಾರೆ. ಆ ತೀರುವಳಿ ಪತ್ರದ ಧೃಡೀಕೃತ ನಕಲನ್ನು ಸಹಾ ನಾನು ಹಾಜರುಪಡಿಸಿದ್ದೇನೆ ಮತ್ತು ಈಗ ನಾನು ಈ ನ್ಯಾಯಾಲಯದ ಮುಂದೆ ಹೇಳಿದಂತಹ ಎಲ್ಲಾ ಮಾಹಿತಿಗಳನ್ನು ಬರೆದು ನೀಡಿದ್ದೇನೆ. ಸದರಿ ಬರವಣಿಗೆಯನ್ನು ನಿ.ಸಿ.**2** ಎಂದು ಮತ್ತು ಸದರಿ ತೀರುವಳಿ ಪತ್ರವನ್ನು ನಿ.ಸಿ.**3** ಎಂದು ಗುರುತಿಸಿದೆ.

**ಪಾಟೀ ಸವಾಲು:** ಅರ್ಜಿದಾರರ ಪರ ವಕೀಲರು ಮತ್ತು ಎದುರುದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಮುಂದೆ ಬಂದಿರುವುದಿಲ್ಲ, ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.